ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಚಾಮರಾಜನಗರ,
(ಆಯುಷ್ ಇಲಾಖೆ)

# ಜಿಲ್ಲಾ ಆಯುಷ್ ಕಛೇರಿ

ಕೊ.ಸಂ: 304, 3ನೇ ಮಹಡಿ, ಜಿಲ್ಲಾಡಳಿತ ಭವನ, ಚಾಮರಾಜನಗರ-571313.
ಕಛೇರಿ ದೂರವಾಣಿ ನಂ. 08226-222563, ಇ ಮೇಲ್- dao.chamarajanagar19@gmail.com

ಸಂ/ಜಿಆಕಚಾನ/25/ನೇಮಕಾತಿ/2025-26 ದಿನಾಂಕ 22-12-2025

## -:ಅಧಿಸೂಚನೆ:-

ಚಾಮರಾಜನಗರ ಜಿಲ್ಲೆಯ ಆಯುಷ್ ಇಲಾಖೆಯ ವ್ಯಾಪ್ತಿಗೆ ಬರುವ ಕೇಂದ್ರ ಪುರಸ್ಕೃತ ಯೋಜನೆಯ ರಾಷ್ಟ್ರೀಯ ಅಯುಷ್ ಅಭಿಯಾನದಡಿ ಮೇಲ್ದರ್ಜೆಗೇರಿಸಲಾದ ಸರ್ಕಾರಿ ಆಯುರ್ವೇದ ಆಸ್ಪತ್ರೆ, ಚಾಮರಾಜನಗರ ಇಲ್ಲಿಗೆ ಸೃಜನೆಗೊಂಡು ಖಾಲಿ ಇರುವ ಆಯುರ್ವೇದ ತಜ್ಞ ವೈದ್ಯರು-01 ಹುದ್ದೆಯನ್ನು ಚಾಲ್ತಿಯಲ್ಲಿರುವ ಮೀಸಲಾತಿ ನಿಯಮಗಳು ಮತ್ತು ಮೆರಿಟ್ ಅನ್ವಯ ಪಾರದರ್ಶಕವಾಗಿ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ಆರ್ಥಿಕ ವರ್ಷದ ಕೊನೆಯವರೆಗೆ/ಆಯುಷ್ ನಿರ್ದೇಶನಾಲಯದ ಮುಂದಿನ ಆದೇಶದವರೆಗೆ ನೇಮಕ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. **ಆಯುರ್ವೇದ ತಜ್ಞವೈದ್ಯರು** – 01 ಹುದ್ದೆ

   **ವಿದ್ಯಾರ್ಹತೆ** : ಆಯುರ್ವೇದದಲ್ಲಿ ಸ್ನಾತ್ತಕೋತ್ತರ (MS In Shaylatantra ಅಥವಾ MD In Panchakarma/Kayachikista ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿರಬೇಕು)

**ಮೀಸಲಾತಿ : ಪರಿಶಿಷ್ಟ ಜಾತಿ/ಸಾಮಾನ್ಯ**

**ಸಂಚಿತ ವೇತನ** : 52550+5000(PG allowance)= 57550/-

**ವಯೋಮಿತಿ : 45 ವರ್ಷ**

ನಿಗಧಿತ ಅರ್ಜಿ ನಮೂನೆಯನ್ನು ಜಿಲ್ಲಾ ಆಯುಷ್ ಕಛೇರಿ, ನಂ.304, 3ನೇ ಮಹಡಿ, ಜಿಲ್ಲಾಡಳಿತ ಭವನ, ಚಾಮರಾಜನಗರ ಇಲ್ಲಿ ವಿತರಿಸಲಾಗುವುದು.

ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ 23-12-2025

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 06-01-2026

ಜಿಲ್ಲಾ ಆಯುಷ್ ಅಧಿಕಾರಿ
ಚಾಮರಾಜನಗರ
ಚಾಮರಾಜನಗರ ಜಿಲ್ಲೆ-571313

CSS 2024-25/Prakatane Doctor

Scanned with OKEN Scanner

**ಷರತ್ತು ಮತ್ತು ನಿಬಂಧನೆಗಳು :-**

1. ಮೇಲಿನ ಹುದ್ದೆಯನ್ನು ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಸಮಿತಿಯು ಮೆರಿಟ್, ಅನುಭವ ಮತ್ತು ಸಂದರ್ಶನದ (ಕ್ರಮವಾಗಿ 70%, 20% & 10% ಆಧಾರದ) ಮೂಲಕ ನೇಮಕಾತಿ ಮಾಡಲಾಗುವುದು.
2. ಗುತ್ತಿಗೆ ಆಧಾರದ ಮೇಲೆ ಮಾಡುವ ನೇಮಕಾತಿಯು ಸಂಪೂರ್ಣ ತಾತ್ಕಾಲಿಕ ಹಾಗೂ ದಿನಾಂಕ 31-03-2026ಕ್ಕೆ ಕೊನೆಗೊಳ್ಳುತ್ತದೆ. ಹಾಗೂ ಆರ್ಥಿಕ ವರ್ಷ ಕೊನೆಯ ದಿನ ಮುಕ್ತಾಯವಾದ ನಂತರ ಒಂದು ದಿನ ವಿರಾಮ ನೀಡಿ ತರುವಾಯ ಮುಂದಿನ ಆರ್ಥಿಕ ವರ್ಷಕ್ಕೆ ಗುತ್ತಿಗೆ ಸೇವೆಯನ್ನು ಮುಂದುವರಿಸುವ ಬಗ್ಗೆ ಆಯುಷ್ ನಿರ್ದೇಶನಾಲಯ ಮತ್ತು ಜಿಲ್ಲಾ ಆಯುಷ್ ಸಮಿತಿಯ ನಿರ್ಣಯದಂತೆ ಕ್ರಮಕೈಗೊಳ್ಳಲಾಗುವುದು.
3. ಕ.ನಾ.ಸೇ (ಸಾಮಾನ್ಯ ನೇಮಕಾತಿ) ನಿಯಮಗಳು ರೀತ್ಯ ನಿಗದಿತ ವಯೋಮಿತಿಯಲ್ಲಿರುವುದು.
4. ಮೇಲ್ಕಂಡ ಹುದ್ದೆಗಳಲ್ಲಿ ಮೀಸಲಾತಿ ಹುದ್ದೆಗೆ ಅರ್ಜಿ ಸಲ್ಲಿಸುವರು ಸಧ್ಯ ಚಾಲ್ತಿಯಲ್ಲಿರುವ (ಇತ್ತೀಚಿನ) ನಮೂನೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಕಾನೂನು ಬದ್ಧವಾಗಿ ಪ್ರಮಾಣ ಪತ್ರವನ್ನು ಪಡೆದು ದೃಢೀಕೃತ ನಕಲನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು. ಗ್ರಾಮೀಣ ಮೀಸಲಾತಿ ಪಡೆಯುವ ಅಭ್ಯರ್ಥಿಗಳು ನಮೂನೆ-1 ಹಾಗೂ ನಮೂನೆ-2ನ್ನು ಕಡ್ಡಾಯವಾಗಿ ಲಗತ್ತಿಸಬೇಕು. ಜಿಲ್ಲಾ ಆಯುಷ್ ಅಧಿಕಾರಿಗಳ ಬಳಿ ಕರ್ತವ್ಯಕ್ಕೆ ಹಾಜರಾಗುವಾಗ ಆಯ್ಕೆಯಾದ ಅಭ್ಯರ್ಥಿಗಳು ಶೈಕ್ಷಣಿಕ ವಿದ್ಯಾರ್ಹತೆಗಳು, ವಯಸ್ಸು, ಜಾತಿ ಮತ್ತು ವಾರ್ಷಿಕ ಆದಾಯದ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಹಾಜರು ಪಡಿಸುವುದು.
5. ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗುವುದು.
6. ಕೇಂದ್ರ ಸ್ಥಾನದಲ್ಲಿ ತಂಗಿದ್ದು, 24 ಗಂಟೆಗಳಲ್ಲೂ ಯಾವುದೇ ತುರ್ತು ಸೇವೆಗೆ ಲಭ್ಯವಿದ್ದು ಸೇವೆ ಸಲ್ಲಿಸುವ ಷರತ್ತಿಗೆ ಒಳಪಟ್ಟಿರಬೇಕು.
7. ತೃಪ್ತಿಕರವಾದ ಕರ್ತವ್ಯ ನಿರ್ವಹಣೆ ಷರತ್ತಿಗೆ ಒಳಪಟ್ಟು ಪ್ರತಿ ತಿಂಗಳು ಸಂಚಿತ ಮೊತ್ತವನ್ನು ಮಾತ್ರ ಪಡೆಯುವುದು.
8. ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯನ್ನು ಯಾವುದೇ ಸಮಯದಲ್ಲಿ ಕಾರಣವಿಲ್ಲದೇ ಅಥವಾ ಸರ್ಕಾರ ಉಭಯ ಪಕ್ಷಗಳು ಒಂದು ತಿಂಗಳ ನೋಟೀಸು ಕೊಟ್ಟು ಸೇವೆಯನ್ನು ಪರ್ಯವಸನಗೊಳಿಸುವ ಷರತ್ತಿಗೊಳಪಟ್ಟಿರುತ್ತದೆ.
9. ದುರ್ನಡತೆಯಿಂದಾಗಿ ಸರ್ಕಾರಕ್ಕೆ ನಷ್ಟ ಉಂಟಾದಲ್ಲಿ ಅದನ್ನು ಸರ್ಕಾರಕ್ಕೆ ತುಂಬಿಕೊಡುವುದು.
10. ಖಾಯಂ ನೇಮಕಾತಿಗಾಗಲೀ, ವಿಶ್ರಾಂತಿ ವೇತನಕ್ಕಾಗಲೀ, ನಿವೃತ್ತಿ ಉಪದಾನಕ್ಕಾಗಲೀ, ವೇತನ ಶ್ರೇಣಿಗಾಗಲೀ ಅಥವಾ ಯಾವುದೇ ಭತ್ಯಗಳನ್ನು ಪಡೆಯುವ ಹಕ್ಕನ್ನು ಹೊಂದಿರುವುದಿಲ್ಲ.
11. ಪ್ರತಿಯೊಂದು ಹುದ್ದೆಗಳು ಗುತ್ತಿಗೆ ಆಧಾರದ ತಾತ್ಕಾಲಿಕ ನೇಮಕಾತಿಯಾಗಿರುತ್ತದೆ. ಹಾಗೂ ನಿರ್ದಿಷ್ಟ ಆಸ್ಪತ್ರೆಗೆ ಆಗಿರುವುದರಿಂದ ಯಾವುದೇ ಆಸ್ಪತ್ರೆಗಾಗಲೀ, ಅಥವಾ ಜಾಗಕ್ಕಾಗಲೀ ವರ್ಗಾವಣೆ ಅಥವಾ ಪ್ರತಿ ನಿಯೋಜನೆ ಪಡೆಯಲು ಹಕ್ಕಿರುವುದಿಲ್ಲ.
12. ನಿಗಧಿತ ಅರ್ಜಿ ನಮೂನೆಗಳನ್ನು ದ್ವಿಪ್ರತಿಯಲ್ಲಿ ಭರ್ತಿಮಾಡಿ ಸಂಬಂಧಿಸಿದ ಅಗತ್ಯ ದಾಖಲಾತಿಗಳೊಂದಿಗೆ ದಿನಾಂಕ 06-01-2026 ರಂದು ಸಾಯಂಕಾಲ 4-00 ಗಂಟೆಯ ಒಳಗೆ ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ನಂ. 304, 3ನೇ ಮಹಡಿ, ಜಿಲ್ಲಾಡಳಿತ ಭವನ, ಚಾಮರಾಜನಗರ ಇವರ ಕಛೇರಿಗೆ ನೊಂದಾಯಿತ ಅಂಚೆ ಮೂಲಕ ಅಥವಾ ಖುದ್ದಾಗಿ ತಲುಪಿಸುವುದು. ಅರ್ಜಿಯನ್ನು ಈ ಕಛೇರಿಯಲ್ಲಿ ಉಚಿತವಾಗಿ ಪಡೆಯಬಹುದಾಗಿದೆ. **ಅರ್ಜಿಯ ಲಕೋಟೆಯ ಮೇಲೆ ಚಾಮರಾಜನಗರ ಜಿಲ್ಲೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಆಯುರ್ವೇದ ವೈದ್ಯರು ನೇಮಕಾತಿಗಾಗಿ** ಅರ್ಜಿ ಎಂದು ನಮೂದಿಸತಕ್ಕದ್ದು, ನಿಗಧಿತ ಅವಧಿ ಮೀರಿ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಅಂತಹ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.
13. ಇನ್ನು ಹೆಚ್ಚಿನ ಮಾಹಿತಿ ಬೇಕಾಗಿದ್ದಲ್ಲಿ ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ನಂ. 304, 3ನೇ ಮಹಡಿ, ಜಿಲ್ಲಾಡಳಿತ ಭವನ, ಚಾಮರಾಜನಗರ ರವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.

ಜಿಲ್ಲಾ ಆಯುಷ್ ಅಧಿಕಾರಿ
ಚಾಮರಾಜನಗರ
ಚಾಮರಾಜನಗರ ಜಿಲ್ಲೆ-571313

CSS 2024-25/Prakatane Doctor

Scanned with OKEN Scanner